IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕುಂ.ವೀರಭದ್ರಪ್ಪ ಅವರ ‘ದೇವರ ಹೆಣ’ ಕಥೆಯಾಧಾರಿತ ‘ಹಸಿವು’ ನಾಟಕದ ವಿಮರ್ಶೆ

**Review of Kum.Veerabhadrappa's 'Devara Hena' story-based play 'Hasivu'**

**@ ಡಾ. ಕುಪ್ಪನಹಳ್ಳಿ ಎಂ. ಭೈರಪ್ಪ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ.ನಾರಾಯಣಪುರ, ಬೆಂಗಳೂರು-077

**Abstract :** *ಜಗತ್ತಿನ ಜೀವರಾಶಿಗೆ ಜೀವಚೈತನ್ಯವನ್ನು ನೀಡುವಂಥದ್ದು ಅನ್ನ. ಆದರೆ ಇಂಥ ಅನ್ನಕ್ಕೂ ಮಾನವರು ಭೇದಮತಿಯನ್ನು ಆರೋಪಿಸಿ, ಮೇಲು-ಕೀಳುಗಳ ಮಾನದಂಡದಲ್ಲಿ ದೂರದೂರವಾಗಿಬಿಟ್ಟರು. ಅನ್ನಭೇದದ ಚರಿತ್ರೆ ನಿನ್ನೆ ಮೊನ್ನೆಯದಲ್ಲ; ಸಾವಿರಾರು ವರ್ಷಗಳಿಂದ ನಡೆದು ಇಂದಿಗೂ ಜೀವಂತವಾಗಿರುವಂಥದ್ದು· ಅನ್ನದ ಹೆಸರಲ್ಲಿ ಜಾತೀಕರಣ ಭೇದದೊಂದಿಗೆ ರಾಜಕಾರಣವೂ ಸೇರಿಕೊಂಡು ಪ್ರಜಾಪ್ರಭುತ್ವವನ್ನು ಅಣಕಿಸುವಂತೆ ಆಗಾಗ ಕೊಲೆಗಳು ನಡೆಯುತ್ತಿರುವುದು ಆಧುನಿಕ ಕಾಲಘಟ್ಟದ ದುರಂತ· ಇಂಥ ದುರಂತ ಸಂಗತಿಯನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರತಿಸ್ಪಂದನೆಗಳು ಮೂಡಿಬಂದಿವೆ. ಅನ್ನಕ್ಕಾಗಿ ಹಂಬಲಿಸಿ ನರಳಿದ ಹಸಿವಿನ ವೈಪರೀತ್ಯದ ವಿರಾಟ್ ಸ್ವರೂಪವನ್ನು ಕನ್ನಡ ಮನಸ್ಸು ತನ್ನ ಸೂಕ್ಷ್ಮಸಂವೇದನೆಯಲ್ಲಿ ದರ್ಶಿಸಿದೆ. ಅಂತಹ ಸೃಜನಶೀಲ ಕಥಾನಕಗಳಲ್ಲಿ ಕನ್ನಡದ ಪ್ರಸಿದ್ಧ ಕಥೆಗಾರರಾದ ಕುಂ.ವೀರಭದ್ರಪ್ಪ ಅವರ ‘ದೇವರ ಹೆಣ’ವೂ ಒಂದು. ಸಾಮುದಾಯಿಕ ಹಾಗೂ ಪಾರಂಪರಿಕ ನೆಲೆಯ ಅನ್ನದ ಪ್ರಶ್ನೆ ಹಾಗೂ ಹಸಿವಿನ ನಿರಂತರತೆಯ ಚಿತ್ರಣವುಳ್ಳ ಈ ಕಥೆಯನ್ನು ಆಧರಿಸಿ ರೂಪುಗೊಂಡ “ಹಸಿವು” ರಂಗರೂಪದಲ್ಲಿ ಆಧುನಿಕರಿಗೆ ಹಸಿವಿನ ಪರಂಪರೆ ಮತ್ತು ಅನ್ನದ ಅರಿವು ಮೂಡಿಸುವ ಮಹದಾಶಯ ಎದ್ದು ಕಾಣುತ್ತದೆ.*

**Key Words:** ಅನ್ನ,ಅನ್ನಾವತಾರ,ಕನ್ನಡ, ಕುಂ.ವೀರಭದ್ರಪ್ಪ, ದೇವರ ಹೆಣ, ಹಸಿವು, ರೊಣ್ಣಿ, ಸೊಣ್ಣಿ, ಕಲಾಯಾನ



**(ಚಿತ್ರ: 'ಹಸಿವು' ರಂಗಪ್ರಯೋಗದ ಒಂದು ದೃಶ್ಯ)**

## ಪೀಠಿಕೆ

ಹಸಿವಿನ ವೈಪರೀತ್ಯದ ವಿರಾಟ್ ಸ್ವರೂಪವನ್ನು ಕನ್ನಡ ಮನಸ್ಸು ತನ್ನ ಸೂಕ್ಷ್ಮಸಂವೇದನೆಯಲ್ಲಿ ದರ್ಶಿಸಿದೆ ಎಂಬುದಕ್ಕೆ ಹಲವಾರು ಸಾಕ್ಷಿಗಳಿವೆ. ದೇವರ ದಾಸಿಮಯ್ಯ ತನ್ನ ವಚನವೊಂದರಲ್ಲಿ, "ಹಸಿವೆಂಬ ಹೆಬ್ಬಾವು ಬಸಿರ ಬಂದಿಡಿದೆಡೆ ವಿಷವೇರಿತ್ತಯ್ಯ ಅಪಾದ ಮಸ್ತಕಕೆ, ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ ಧರೆಯೊಳಗಾತನೇ ಗಾರುಡಿಗ ಕಾಣಾ.." ಎಂದರೆ, ಸರ್ವಜ್ಞ ತನ್ನ ತ್ರಿಪದಿಯೊಂದರಲ್ಲಿ, "ಅನ್ನದೇವರು ಮುಂದೆ ಇನ್ನು ದೇವರು ಉಂಟೆ?, ಅನ್ನವಿರುವನಕ ಪ್ರಾಣವೀ ಜಗದೊಳಗೆ, ಅನ್ನದೈವ ಸರ್ವಜ್ಞ" ಎಂದಿರುವುದು ಹಸಿವಿನ ಹಾಹಾಕಾರದ ವಾಸ್ತವ ಮತ್ತು ಅದನ್ನು ನೀಗಿಸುವ ಅನ್ನದ ಸಾಕ್ಷಾತ್ಕಾರದ ಮಹದಾಶಯವುಳ್ಳದ್ದು. ದ·ರಾ·ಬೇಂದ್ರೆ ಅವರು ತಮ್ಮ 'ಅನ್ನಾವತಾರ' ಕವಿತೆಯಲ್ಲಿ, ದೇವರು ಈ ಧರೆಯನ್ನು ಉಳಿಸಲು ಎಷ್ಟೋ ಅವತಾರಗಳನ್ನು ಎತ್ತಿ ಬಂದ, ಆದರೆ ಅನ್ನದೇವನಾಗಿ ಇನ್ನೂ ಬರಲಿಲ್ಲ, ಇದ್ದವರ ಇರುಚಿಂತೆ ಬಗೆಹರಿಯಲಿಲ್ಲಾ ಎಂದಿದ್ದಾರೆ· ತ·ರಾ·ಸು ಅವರ 'ಅನ್ನಾವತಾರ' ನಾಟಕದಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಹಸಿವಿನ ಸಮಸ್ಯೆಯು ಗಂಭೀರವಾಗಿ ಮಂಡಿಸಲ್ಪಟ್ಟಿದೆ· ವಿಶ್ವಮಾನವ ವಿವೇಕಾನಂದರು ವಿಶ್ವದಾದ್ಯಂತ ಓಡಾಡಿದ್ದು ಭಾರತದ ಬಡಜನರ ಹಸಿವನ್ನು ನೀಗಿಸಲೆಂದೆ ಎಂಬ ಸತ್ಯವನ್ನು ಮರೆಯಲಾಗದು· ಜಗತ್ತಿನ ಜೀವರಾಶಿಗೆ ಜೀವಚೈತನ್ಯವನ್ನು ನೀಡುವಂಥದ್ದು ಅನ್ನ. ಆದರೆ ಇಂಥ ಅನ್ನಕ್ಕೂ ಮಾನವರು ಭೇದಮತಿಯನ್ನು ಆರೋಪಿಸಿ, ಮೇಲು-ಕೀಳುಗಳ ಮಾನದಂಡದಲ್ಲಿ ದೂರದೂರವಾಗಿಬಿಟ್ಟರು. ಅನ್ನಭೇದದ ಚರಿತ್ರೆ ನಿನ್ನೆ ಮೊನ್ನೆಯದಲ್ಲ; ಸಾವಿರಾರು ವರ್ಷಗಳಿಂದ ನಡೆದು ಇಂದಿಗೂ ಜೀವಂತವಾಗಿರುವಂಥದ್ದು· ಅನ್ನದ ಹೆಸರಲ್ಲಿ ಜಾತೀಕರಣ ಭೇದದೊಂದಿಗೆ ರಾಜಕಾರಣವೂ ಸೇರಿಕೊಂಡು ಪ್ರಜಾಪ್ರಭುತ್ವವನ್ನು ಅಣಕಿಸುವಂತೆ ಆಗಾಗ ಕೊಲೆಗಳು ನಡೆಯುತ್ತಿರುವುದು ಆಧುನಿಕ ಕಾಲಘಟ್ಟದ ದುರಂತ·

## ರಂಗಾಂತರಂಗ

ಕನ್ನಡ ವಿವೇಕ ಪರಂಪರೆಯ ಪ್ರಸರಣ ಹಾಗೂ ವಿಸ್ತರಣದ ಭಾಗವಾಗಿ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಈ ಬಾರಿ ಪ್ರದರ್ಶನಗೊಂಡ*(03-04-2023)* ನಾಟಕ ಅನ್ನ ಕೇಂದ್ರಿತವಾದ "ಹಸಿವು". ಇದು ಮೂಲತಃ ಕನ್ನಡದ ಪ್ರಸಿದ್ಧ ಕಥೆಗಾರರಾದ ಕುಂ.ವೀರಭದ್ರಪ್ಪ ಅವರು ರಚಿಸಿರುವ "ದೇವರ ಹೆಣ" ಕಥೆಯನ್ನು ಆಧರಿಸಿ ರೂಪುಗೊಳಿಸಿದ ರಂಗಪ್ರಯೋಗ. ಬೆಂಗಳೂರಿನ ಕ್ರಿಸ್ತು ಜಯಂತಿ ಕಾಲೇಜಿನ ಕನ್ನಡ ವಿಭಾಗವು ತನ್ನ "ಕನ್ನಡ ಸಾಹಿತ್ಯ ವೇದಿಕೆ"ಯ ಮೂಲಕ "ರಂಗಾಂತರಂಗ" ಎಂಬ ವಿದ್ಯಾರ್ಥಿ

ಕಲಾವಿದರ ತಂಡ ಕಟ್ಟಿಕೊಂಡು ಪ್ರತೀ ವರ್ಷ ನಾಟಕ ಪ್ರದರ್ಶನ ಸಾದರಪಡಿಸಿಕೊಂಡು ಬರುತ್ತಿದೆ. ಈ ಮೂಲಕ ಈವರೆಗೆ ಸುಮಾರು *27* ನಾಟಕಗಳನ್ನು ಪ್ರದರ್ಶಿಸಿ ಕನ್ನಡ ರಂಗಭೂಮಿಗೆ ತನ್ನದೇ ಆದ ಕಾಣ್ಕೆಯನ್ನು ನೀಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಪ್ರತೀ ಬಾರಿಯೂ ಒಂದೊಂದು ವಿಶಿಷ್ಟವಾದ ವಸ್ತುವನ್ನು ಆಯ್ಕೆ ಮಾಡಿಕೊಂಡು ರಂಗ ಪ್ರಯೋಗವನ್ನು ಸಿದ್ಧಪಡಿಸಲಾಗುತ್ತದೆ. ತದನಂತರ ಪದವಿ ವಿದ್ಯಾರ್ಥಿಗಳಿಗೆ ರಂಗಪ್ರಯೋಗ ಸಂಬಂಧವಾಗಿ ಸಂದರ್ಶನ ನಡೆಸಿ ಪ್ರತಿಭಾವಂತ ಕಲಾಸಕ್ತರನ್ನು ಆಯ್ಕೆ ಮಾಡಲಾಗುತ್ತದೆ. ಅವರಿಗೆ ಕಾಲೇಜಿನ ನಾಟಕ ವಿಭಾಗದ ಪ್ರಾಧ್ಯಾಪಕ-ನಿರ್ದೇಶಕರು ಯಾವುದೇ ವೃತ್ತಿಪರರಿಗೂ ಕಡಿಮೆ ಇಲ್ಲದಂತೆ ತರಬೇತಿ ನೀಡುತ್ತಾರೆ. ಅಕಾಡೆಮಿಕ್ ವಲಯದ ಈ ಕಲಾವಿದರು ತಮ್ಮ ಶ್ರದ್ಧೆ ಹಾಗೂ ಸೃಜನಶೀಲ ಪ್ರತಿಭೆಯ ಮೂಲಕ ಅನುಭವೀ ಕಲಾವಿದರಾಗಿಯೇ ಅರಳಿಬಿಡುವುದು ಅಚ್ಚರಿಯೇ ಸರಿ. ಇಲ್ಲಿ ವಿದ್ಯಾರ್ಥಿಗಳನ್ನು ನಾಟಕ ಪ್ರದರ್ಶನ ಮೂಲಕ ಕೇವಲ ಕಲಾವಿದರನ್ನಾಗಿ ಮಾತ್ರ ರೂಪಿಸುವುದಷ್ಟೇ ಉದ್ದೇಶವಲ್ಲ; ಸೃಜನಶೀಲ ಕಲಾಯಾನದ ಮೂಲಕ ಚಲನಶೀಲ ಲೋಕಪ್ರಜ್ಞೆಯನ್ನು ವಿದ್ಯಾರ್ಥಿ ಸಮುದಾಯದಲ್ಲಿ ಒಡಮೂಡಿಸುವ ಮಹದಾಶಯವೂ ಆಗಿದೆ.



**(ಚಿತ್ರ: ಪ್ರಸಿದ್ಧ ನಾಟಕಕಾರ ಗಿರೀಶ್ ಕಾರ್ನಾಡ್ ಅವರೊಂದಿಗೆ ಕಥೆಗಾರರಾದ ಕು.ವೀರಭದ್ರಪ್ಪ)**

## ರಂಗರೂಪದ ಕಥಾವಸ್ತು

ಜೀತಗಾರ ಕುಟುಂಬವೊಂದು ಹಸಿವಿನಿಂದ ನರಳಿದ ಹಾಗೂ ಹಸಿವಿನಾಹಾಕಾರದ ನಡುವೆಯೂ ಜೀವನಪ್ರೀತಿಯಿಂದ ಅರಳಿದ ಕರುಣಾಜನಕ ಕಥನವುಳ್ಳದ್ದು. ಇಡೀ ಊರನ್ನು ತಮ್ಮ ಕಲಾಪ್ರತಿಭೆಯ ಮೂಲಕ ಮನೋಲ್ಲಾಸಗೊಳಿಸುವ ಠೊಣ್ಣಿಯ ಕುಟುಂಬವು ಹಸಿವಿನ ಭೀಕರತೆಯಲ್ಲಿ ಭಿಕಾರಿಯಾಗಿಯೇ ಇರಬೇಕಾಗುತ್ತದೆ. ಗೌಡರ ಮನೆಯಲ್ಲಿ ಜೀತಗಾರನಾಗಿ ದುಡಿವ ಅಪ್ಪಯ್ಯ (ಠೊಣ್ಣಿ) ಇವತ್ತಾದರೂ ಮನೆಗೆ ಜ್ವಾಳ ತರ್ತಾನೆ, ತಾತಯ್ಯನಿಗೆ ಔಷಧಿ ತರ್ತಾನೆ ಅಂತ ನಿತ್ಯವೂ ಕಾಯುವ ಕುಟುಂಬವದು. ಒಮ್ಮೆ ಗೌಡತಿಯಿಂದ ಒಂದಿಡಿ ಜ್ವಾಳವಷ್ಟೇ ಸಿಕ್ಕುತ್ತದೆ. ಆದರೆ ಅದು ಹುಳುಬಿದ್ದ ನಿರುಪಯೋಗಿ ಜ್ವಾಳ. ಹಸಿವಿಗೆ ಅನ್ನವನ್ನೀಯಲೇಬೇಕಾದ ಅನಿವಾರ್ಯತೆಯಲ್ಲಿ ಠೊಣ್ಣಿಯ ಮಗ ಅಪಾರಿ ಹಿಡಿದು ತರುವ ಇಲಿಗಳನ್ನೂ ಸುಟ್ಟು ತಿನ್ನುತ್ತಾರೆ. ಠೊಣ್ಣಿಯ ಹೆಂಡತಿಗೆ ಇಲಿ ಆಹಾರ ಇಷ್ಟವಾಗದು. ಹೀಗಾಗಿ ಊರೊಳಗೆ ಹೋಗಿ ಅನ್ನಕ್ಕಾಗಿ ಮನೆ ಮನೆ ಭಿಕ್ಷೆ ಬೇಡುತ್ತಾಳೆ. ಜಾತಿಯ ಕಾರಣ, ಊರ ಹೊರಗಿರುವವರು ಭಿಕ್ಷೆ ಬೇಡಲು ಊರೊಳಗೆ ಬರುವುದನ್ನು ಊರು ಸಹಿಸದು. ಇತ್ತ ಇವರ ಹಸಿವು ನೀಗದು. ಆದಾಗ್ಯೂ ಕೇರಿಯ ಕಲಾಪರಂಪರೆಯ ಜೀವನದಿಯಂತಿರುವ ಠೊಣ್ಣಿಯ ತಂದೆಯು ಬಾರಿಸುವ ತಮಟೆ ಸದ್ದು ಹಾಗೂ ಕುಣಿತವು ಊರಿನವರಿಗೆ ಮನರಂಜನೆಯೆನಿಸುತ್ತದೆ. ಕಲಾಪ್ರದರ್ಶನ ಮುಗಿದ ನಂತರ ಊರು ಮರಳುತ್ತದೆ, ತಾತಯ್ಯನ ಅನಾರೋಗ್ಯ ಮುಂದುವರೆಯುತ್ತದೆ. ಈ ನಡುವೆ ಊರೊಳಗೆ ಅದ್ದೂರಿಯಾದ ಜಾತ್ರೆ ಸಂಭ್ರಮ. ದೇವರ ಉತ್ಸವದಲ್ಲಿ ಊರಿಗೂರೇ ಪಾಲ್ಗೊಂಡು ಸಂಭ್ರಮಿಸುತ್ತದೆ. ಠೊಣ್ಣಿ ಕುಟುಂಬವು ದೂರದಲ್ಲೆಲ್ಲೋ ನಿಂತು ಕೈಮುಗಿಯುತ್ತದೆ. ಹತ್ತಿರ ಬಂದರೆ ಈ ಹಿಂದಿನಂತೆ

ಇಡೀ ಊರೇ ಅವರ ಮೇಲೆ ಹತ್ತಿ ತುಳಿಯುತ್ತದೆ. ಹೀಗಾಗಿ ಜಾತೀಯ ಭಯ-ಭಕ್ತಿಗಳು ರೊಣ್ಣಿಯಂಥ ಕುಟುಂಬಗಳನ್ನೂ ಅಲ್ಲಿಯೇ ಉಳಿಯುವಂತೆ ಮಾಡಿರುವುದು. ಗೌಡರ ಮನೆಯ ಹೆಣ್ಣುಮಗುವು ಕೇರಿ ಮಗುವಿನೊಂದಿಗೆ ಆಟವಾಡಿ ಬಾವಿಗೆ ಬಿದ್ದಾಗ ಕಾಪಾಡುವುದು ರೊಣ್ಣಿಯ ಮಗ ಅಪಾರಿ. ಆದರೆ ಈ ಜೀವರಕ್ಷಣೆಗಿಂತ, ಊರಿಗೆ ಬೇಕಿರುವುದು ಜಾತಿರಕ್ಷಣೆ. ಹೀಗಾಗಿ ಬಾವಿಯಿಂದ ಹೆಣ್ಣುಮಗುವನ್ನು ರಕ್ಷಿಸಿದ ಕೇರಿಯ ಹುಡುಗನೇ ಜಾತಿ ಶಿಕ್ಷೆಗೆ ಒಳಗಾಗುತ್ತಾನೆ.

ಕಾಲಕಳೆದಂತೆ ಗೌಡರ ಮನೆಯ 'ದೇವರು' ಎಂದೇ ಭಾವಿಸಲಾಗಿದ್ದ, ರೊಣ್ಣಿಯ ಉಸ್ತುವಾರಿಯಲ್ಲಿ ಬೆಳೆದಿದ್ದ ಎತ್ತೊಂದು ತೀರಿಕೊಳ್ಳುತ್ತದೆ. ಇದರಿಂದ ಗೌಡರ ಮನೆಯಲ್ಲಿ ದುಃಖವು ಮಡುಗಟ್ಟಿದರೆ, ರೊಣ್ಣಿಯ ಮನಸಲ್ಲಿ ಸಂಭ್ರಮ. ಇದು ಪಾರಂಪರಿಕ ಆಹಾರ ಸಂಸ್ಕೃತಿಯ ಹಕ್ಕು ಹಾಗೂ ಭೀಕರ ಹಸಿವಿಗೆ ಸಂಬಂಧಿಸಿದ ಸಂಭ್ರಮವೇ ಹೊರತು ಮಾಂಸಾಹಾರ ಗೀಳಿನ ನಿರೀಕ್ಷೆಯೂ ಅಲ್ಲ, ಗೌಡರ ಮನೆಯ ದುಃಖದ ಕುಹಕವೂ ಅಲ್ಲ. ತಮ್ಮ ಮನೆಯ ದೇವರೆಂದೇ ಭಾವಿಸಿದ್ದ ಸತ್ತದನವನ್ನು ಕೆಳವರ್ಗದವರು ಕೊಯ್ದು ತಿನ್ನಲೆಂದು ಕೊಡುವುದಕ್ಕೆ ಗೌಡ ಒಪ್ಪುವುದಿಲ್ಲ. ರೊಣ್ಣಿಯ ನಿರೀಕ್ಷೆ ಹುಸಿಗೊಂಡು ಚಿಂತಾಕ್ರಾಂತನಾಗುತ್ತಾನೆ. ರೊಣ್ಣಿಯ ಕುಟುಂಬದ ಹಸಿವಿನ ಹಾಹಾಕಾರದ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳಲೆಂದು ಸೆಲ್ವಪ್ಪನಂತವರು ಹೊಂಚುಹಾಕುತ್ತಾರೆ. ಆದರೆ ಹಸಿವಿನಿಂದ ಪ್ರಾಣ ಬಿಟ್ಟರೂ ಶೀಲ, ಸ್ವಾಭಿಮಾನ ಬಿಡದ ರೊಣ್ಣಿಯ ಹೆಂಡತಿ ಸೊಣ್ಣಿಯ ಪ್ರತಿರೋಧವು ಬಡವರೆದೆ ಬಂಡಾಯದ ನಿರ್ಮಲ ಶಕ್ತ್ಯಾಭಿವ್ಯಕ್ತಿಗೆ ಸಾಕ್ಷಿ. ಕೊನೆಗೆ ಹಸಿವನ್ನೂ ಅನಾರೋಗ್ಯವನ್ನೂ ತಾಳಲಾರದ ರೊಣ್ಣಿಯ ತಂದೆ ತಾತಯ್ಯ ತೀರಿಕೊಳ್ಳುತ್ತಾನೆ. ತಾತಯ್ಯನನ್ನು ಮಣ್ಣು ಮಾಡಲೂ ನಯಾಪೈಸೆಯೂ ದಕ್ಕದೆ ರೊಣ್ಣಿ ಹೆಣಗಾಡುತ್ತಾನೆ· ಮುಂದೆ ತನಗೆ ದಕ್ಕದ ದೇವರ ಹೆಣವನ್ನು ಪಡೆದೇ ತೀರಬೇಕೆಂದು ಮೌನಬಂಡಾಯವೆದ್ದ ರೊಣ್ಣಿಯು ಮಣ್ಣಲ್ಲಿ ಹೂತಿದ್ದ ದನವನ್ನು ಹೊರತೆಗೆದು ಬಹುದಿನಗಳ ಹಸಿವನ್ನು ಇಡೀ ಕುಟುಂಬ ಸಂಭ್ರಮದಿಂದ ನೀಗಿಸಿಕೊಳ್ಳುವಂತೆ ಮಾಡುತ್ತಾನೆ· ಹೂತಿದ್ದ ದನವನ್ನು ತಿಂದ ಆರೋಪಕ್ಕಾಗಿ ಪೊಲೀಸರು ರೊಣ್ಣಿಯನ್ನು ಬಂಧಿಸಲು ಬರುತ್ತಾರೆ· ಆಗ, ರೊಣ್ಣಿಯು ತನ್ನ ಕುಟುಂಬ ಸಮೇತ ಜೈಲಿಗೆ ಹೋಗಲು ಸಿದ್ದವೆನ್ನುತ್ತಾನೆ· ಆದರೆ, ಇವರೆಲ್ಲರೂ ಜೈಲಿನಲ್ಲಿ ಸಿಗುವ ಅನ್ನಕ್ಕಾಗಿ ಬರುತ್ತಿದ್ದಾರೆಂದು ಪೊಲೀಸರು ಬಂಧನಕ್ಕೂ ಮುಂದಾಗುವುದಿಲ್ಲ· ಕೊನೆಗೂ ರೊಣ್ಣಿ ಕುಟುಂಬದ ಹಸಿವು ನೀಗುವುದೇ ಇಲ್ಲ· ರೊಣ್ಣಿಯನ್ನು ಅನ್ನದ ಹೆಸರಲ್ಲಿ ಆರೋಪಿಸಿ ಬಂಧಿಸಲು ಇಡೀ ವ್ಯವಸ್ಥೆ ತೋರುವ ಆಸಕ್ತಿಯನ್ನು ಅವನ ಹಸಿವ ನೀಗಿಸುವಲ್ಲಿ ಕಿಂಚಿತ್ತೂ ತೋರುವುದಿಲ್ಲ ಎಂಬುದು ಸರ್ವರೊಳಗೂ ಉಳಿದುಬಿಡುವ ಪ್ರಶ್ನೆಯಾಗಿಬಿಡುತ್ತದೆ·



**(ಚಿತ್ರ: 'ಹಸಿವು' ರಂಗಪ್ರಯೋಗದ ಒಂದು ದೃಶ್ಯ)**

**ಸೂಕ್ಷ್ಮ ಪ್ರಜ್ಞೆಯ ಪ್ರಯೋಗಶೀಲತೆ**

ಕನ್ನಡದ ಇಂತಹ ಕಥಾನಕವೊಂದನ್ನು ರಂಗದರ್ಪಣದಲ್ಲಿ ಅನಾವರಣ ಮಾಡುವಾಗ ಸಹಜವಾಗಿಯೇ ಪ್ರಯೋಗಶೀಲ ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಸಮರ್ಥವಾಗಿ ನಿರ್ವಹಿಸುವ ಸೂಕ್ಷ್ಮ ಪ್ರಜ್ಞೆಯು ನಿರ್ದೇಶಕರಲ್ಲಿ ಜಾಗೃತವಾಗಿದ್ದಾಗ ಮಾತ್ರವೇ ರಂಗರೂಪಗಳು ಯಶಸ್ವಿಯಾಗಿ ಸಾಗಲು ಸಾಧ್ಯ. ಇಲ್ಲವಾದರೆ ರಂಗವಿದೂರ ಭಾವ ಉಂಟಾಗಿಬಿಡುತ್ತದೆ. ಸಾಂಸ್ಕೃತಿಕ ಯಾಜಮಾನ್ಯದ ವಿಕೃತರೂಪಗಳನ್ನು ತಮ್ಮ ಕಥೆಗಳಲ್ಲಿ ಸೂಕ್ಷ್ಮವಾಗಿ ದಾಖಲೀಕರಿಸಿದ ಕಥೆಗಾರರು ಕುಂ.ವೀರಭದ್ರಪ್ಪ. ಅವರ 'ದೇವರ ಹೆಣ' ಕಥೆಯ ಆಶಯಕ್ಕೆ ಧಕ್ಕೆಯಾಗದಂತೆ, ಮೆಟ್ರೋಪಾಲಿಟನ್ ಸಿಟಿಯ ಮನಸುಗಳಿಗೆ ಅರ್ಥವಾಗುವಂತೆ ರಂಗರೂಪವನ್ನು ಸಿದ್ಧಪಡಿಸಿದ್ದಾರೆ. ಕಥಾವಸ್ತುವಿಗೆ ಮತ್ತಷ್ಟು ಮೆರುಗು ತಂದು ಅನ್ನಭೇದದ ಅವತಾರಗಳನ್ನು ಅರಿಯುವಂತೆ ಮಾಡಲು ಸಕಾರಾತ್ಮಕವಾದ ಕೆಲವು ಸೇರ್ಪಡೆಗಳನ್ನೂ ಮಾಡಿಕೊಂಡಿದ್ದಾರೆ.. ಇದು ಕಥಾ ಆಶಯದ ವಿಸ್ತರಣೆಯ ದೃಷ್ಟಿಯಿಂದ ಸ್ವೀಕಾರಾರ್ಹವೇ ಆಗಿದೆ. ಉದಾಹರಣೆಗೆ, ಪ್ರಸ್ತುತ ಹಸಿವು ರಂಗರೂಪದಲ್ಲಿ ನಿರ್ದೇಶಕರ ಸೂಕ್ಷ್ಮತೆಗೆ ಸಾಕ್ಷಿಯಾಗಿರುವುದು "ಬಾವಿ". ಊರ ನಡುವಿನ ಬಾವಿಯಲ್ಲಿ ಎಲ್ಲರೂ ಕುಡಿಯುವ ನೀರು ಸಿಗುತ್ತದೆ. ಭೂತಾಯಿ ಒಡಲಿಂದ ಪಡೆಯುವ ಈ ನೀರಿಗೆ ಯಾವುದೇ ಭೇದವಿಲ್ಲ. ಆದರೆ, ಮಾನವನಿರ್ಮಿತ ಜಾತಿಮತಿಗೆ ಮಾತ್ರ ನೀರಿನ ಹೆಸರಲ್ಲೂ ಭೇದ ಮಾಡುವ ಕ್ರೌರ್ಯ ನಾಜೂಕಾಗಿಬಿಟ್ಟಿದೆ. ಸಾವಿರಾರು ವರುಷಗಳ ಈ ಮನಸ್ಥಿತಿಯನ್ನು ಪ್ರತಿಬಿಂಬಿಸುವ ಬಾವಿಯ ಸುತ್ತಲಿನ ವಿದ್ಯಮಾನಗಳು ಮನೋಜ್ಞವಾಗಿ ಮೂಡಿಬಂದಿವೆ. ಊರಿನ ಹೆಂಗಸರು ತಂತಮ್ಮ ಗಂಡಂದಿರ ಕುರಿತು ಮಾತಾಡಿಕೊಳ್ಳುವುದು, ಗೌಡರ ಮನೆಯ ಜೀತದಾಳು ಡೊಣ್ಣಿಯ ಕುರಿತು ಚರ್ಚಿಸುವುದು, ಮೇಲುವರ್ಗದ ಹೆಂಗಸರು ಹಾಕುವ ನೀರಿಗಾಗಿ ಡೊಣ್ಣಿಯ ಹೆಂಡತಿ ಬಿಂದಿಗೆ ಹಿಡಿದು ದೂರ ನಿಂತು ಕಾಯುವುದು, ಗೌಡರ ಮಗಳು ಆಟವಾಡುತ್ತಾ ಬಾವಿಗೆ ಬೀಳುವುದು, ಬಾವಿಗೆ ಬಿದ್ದ ಆಕೆಯನ್ನು ಡೊಣ್ಣಿಯ ಮಗ ಅಪಾರಿ ರಕ್ಷಿಸುವುದು-ಈ ಬಗೆಯ ದೃಶ್ಯಸಂಯೋಜನೆಯು ಹಸಿವಿನ ಕಥನ ದರ್ಶನವನ್ನು ಮತ್ತೊಂದು ನೆಲೆಗೆ ಒಯ್ದು ಮಾನವ ಹಸಿವಿನ ಅನಂತ ಮುಖಗಳನ್ನು ದರ್ಶಿಸುತ್ತದೆ. ದೇಹದ ಹಸಿವನ್ನು ನೀಗಿಸಲು ಅನ್ನ-ನೀರು ಹೇಗೆ ಬಹುಮುಖ್ಯವೋ ಹಾಗೆಯೆ ಮಾನವತೆಯ ಹಸಿವನ್ನು ನೀಗಿಸಲು ಅರಿವಿನ ಕಾರುಣ್ಯ-ಜಲವು ಮನೋಭೂಮಿಗಳಲ್ಲಿ ಹರಿಯ ಬೇಕಿದೆ. ಹಸಿವಿನ ದರ್ಶನವನ್ನು ಆಹಾರಕ್ಕೆ ಮಾತ್ರವಷ್ಟೇ ಸೀಮಿತಗೊಳಿಸದ ನಿರ್ದೇಶಕರು, ಅದನ್ನೂ ಒಳಗೊಂಡಂತೆ, ಹಸಿವಿನ ನೆಲೆಯನ್ನು ವಿಸ್ತರಿಸಿದ್ದಾರೆ. ಕಥಾನಕವೊಂದನ್ನು ಈ ಬಗೆಯಲ್ಲಿ ರಂಗರೂಪವನ್ನಾಗಿಯಷ್ಟೇ ಮಾಡದೆ ಸೃಜನಶೀಲ ರಂಗಪ್ರಯೋಗವಾಗಿಯೇ ರೂಪಿಸಿರುವುದು ಮೆಚ್ಚುವ ಸಂಗತಿಯಾಗಿದೆ. ಆ ಕಡೆ ಊರು ಈ ಕಡೆ ಕೇರಿ, ನಡುವೆ ಬಾವಿ ಇದೆ. ರಂಗದ ಮೇಲೆ ಈ ಮೂರರ ಕಾಲ, ಸ್ಥಳ, ಕ್ರಿಯೆಯನ್ನು ಸಮಾನಾಂತರದಲ್ಲಿ ಐಕ್ಯಗೊಳಿಸಿದ ರೀತಿಯು ಆಕರ್ಷಕವಾಗಿತ್ತು. ಊರನ್ನು ಧ್ವನಿಸುವ ಎತ್ತರದ ತೆರೆದ ಬಾಗಿಲು, ಕೇರಿಯನ್ನು ಧ್ವನಿಸುವ ಡೊಣ್ಣಿಯ ಬಾಗಿಲೇ ಇಲ್ಲದ ಬಡಗುಡಿಸಲು, ನಡುವೆ ತೆರೆದ ಬಾವಿ. ಇಲ್ಲಿ ಪ್ರಕೃತಿಯ ಬಯಲಲ್ಲಿ ಎಲ್ಲವೂ ತೆರೆದಿವೆ, ಮುಕ್ತವಾಗಿವೆ. ಆದರೆ ಮಾನವಸಂಸ್ಕೃತಿಯ ವಿಕೃತಿಯಲ್ಲಿ ಪ್ರೀತಿ, ಮತಿಗಳು ಮುಚ್ಚಿಕೊಂಡಿವೆ. ನಮ್ಮ ಒಳ-ಹೊರಗೆ ನಡುವೆ ಇಂಥ ಹಲವಾರು ಬಾವಿಗಳಿವೆ; ಜಾತಿಭಾವಿ, ಧರ್ಮಭಾವಿ, ಲಿಂಗಭಾವಿ, ಭಾಷಾಭಾವಿ, ದ್ವೇಷಭಾವಿ ಮೊದಲಾದವು. ಆದರೆ ಅವು ಜೀವಚೈತನ್ಯವಾಗಿ ಹರಿಯದೆ ಜೀವಕಂಟಕವಾಗಿರುವುದು ದುರಂತ. ಇಂಥ ಬಾವಿಗಳೊಳಗೆ ಬಿದ್ದವರನ್ನು ಪ್ರೀತಿಯಿಂದ ಮೇಲೆತ್ತಿ ಕಾಪಾಡುವ ಕಾರುಣ್ಯ, ಪ್ರೀತಿಮತಿಗಳು ಬೇಕೆ ಹೊರತು, ಭೇದವಿಷದಿಂದ ತಮಗೆ ತಾವೇ ಕಂಟಕವಾಗಬಾರದು ಎಂಬ ಧ್ವನ್ಯಾತ್ಮಕ ದೃಶ್ಯೀಕರಣದಿಂದ ರಂಗಪ್ರಯೋಗಕ್ಕೆ ಮೆರುಗು ಬಂದಿತು.

ಇದರ ಜೊತೆಗೆ ನಾಟಕದ ಆರಂಭದಲ್ಲಿ ಅನ್ನವನ್ನು ಹಂಚಿಕೊಂಡು ಉಣ್ಣುವ ದೃಶ್ಯವು ಇಡೀ ನಾಟಕದೊಳಗಿನ ಗಾಢವಾದ ಆಶಯಕ್ಕೆ ಪೂರಕವಾಗಿ ಮೂಡಿಬಂದಿತು. ಇಲಿಗಳನ್ನು ಸುಟ್ಟು ತಿನ್ನುವ ದೃಶ್ಯ, ತಾತಯ್ಯನ ವಾದ್ಯಗೋಷ್ಠಿ, ಬಯಲಾಟ ರೂಪದ ಪಾರಂಪರಿಕ ಕಥಾಭಿನಯ ದೃಶ್ಯ, ಊರ ಹೆಂಗಸರ ಹರಟೆ-ಹೊಡೆದಾಟ, ಡೊಣ್ಣಿ ಹಾಗೂ ಸೊಣ್ಣಿಯರು ಕಾಳು, ಅನ್ನಕ್ಕಾಗಿ ಬೇಡುವ ದೃಶ್ಯ, ಗೌಡರ ಮನೆಯ ದೇವರು ಸತ್ತ ಸಂಗತಿಯ ಚರ್ಚಾ ದೃಶ್ಯ, ತಾತಯ್ಯನ ಸಾವಿನ ದೃಶ್ಯ, ಬಿಳಿಪರದೆಯ ಮೇಲಿನ ನೆರಳು-ಬೆಳಕುಗಳ ಸಂಯೋಗದಲ್ಲಿ ಮೂಡಿಬಂದ ಅನ್ನ ತಿನ್ನುವ ದೃಶ್ಯಗಳು ಮನಸೊಳಗೆ ಅಚ್ಚೊತ್ತಿ ಕೂತುಬಿಡುವಂಥವಾಗಿದ್ದವು.

**ಪಾತ್ರಧಾರಿಗಳ ಕಲಾಭಿವ್ಯಕ್ತಿ**

ತಾತ - ಜ್ಯೋತಿ ಟಿ.ಎನ್

ಠೊಣ್ಣಿ - ರಂಗನಾಥ್ ವೈ.

ಸೊಣ್ಣಿ - ಅಂಕಿತ ಎಸ್. ಶೆಟ್ಟಿ

ತಿಮ್ಮಿ - ಏಂಜೆಲ್ ರಾಣಿ

ಅಪಾರಿ - ಪ್ರಜ್ವಲ್ ವಿ.ಸಿ.

ಗೌಡ್ರು - ಭುವನ್ ವಿ.

ಗೌಡ್ತಿ - ಮಾನಸ ಜಿ.

ಲಚ್ಚಿ - ತನುಶ್ರೀ ಜಿ.

ಸೆಲ್ವಪ್ಪ - ಭಗವತ್ ಶ್ರೀ ಎಸ್.

ಬಶೀರ್ ಸಾಬ್ - ಶ್ರೇಯಸ್ ಎಂ.

ಲಕ್ಷ್ಮಕ್ಕ - ಅನ್ನಪೂರ್ಣ ಎನ್.

ಗೌರಕ್ಕ - ಭೂಮಿಕ ಎಂ.

ಬಸಕ್ಕ - ಅನುಷಾ ಎ.ಟಿ.

ಗಿರಿಜಕ್ಕ - ಪವಿತ್ರ ವಿ.

ಪೊಲೀಸ್ - ಗಟ್ಟು ಸುರೇಂದ್ರ

ಹಸಿವಿನ ಗತಚರಿತ್ರೆಗೆ ಸಾಕ್ಷಿಯಾದ ತಾತನ ಪಾತ್ರವನ್ನು ಜ್ಯೋತಿ ಟಿ.ಎನ್. ಅವರು ಮನೋಜ್ಞವಾಗಿ ಅಭಿನಯಿಸಿದರು. ತಾತನ ನೃತ್ಯಾಭಿನಯ ಹಾಗೂ ಅದಕ್ಕೆ ಪೂರಕವಾದ ಹಾಡು ತಳವರ್ಗದ ಕಲಾಪರಂಪರೆಗೆ ಹಿಡಿದ ಕನ್ನಡಿಯಾಗಿತ್ತು ಹಾಗೂ ಚಿತ್ತಾಕರ್ಷಕವಾಗಿತ್ತು. ತಾತನ ಮಗ ಠೊಣ್ಣಿಯ ಪಾತ್ರವನ್ನು ಅತ್ಯಂತ ಸಮರ್ಥವಾಗಿ ಅಭಿನಯಿಸುವ ಮೂಲಕ ರಂಗನಾಥ್ ವೈ. ಅವರು ತಳವರ್ಗದ ಒಬ್ಬ ಜೀವಂತ ವ್ಯಕ್ತಿಯಂತಾಗಿದ್ದರು. ಹಸಿವಿನ ಎದುರಿನ ಅಸಹಾಯಕತೆ ಹಾಗೂ ಅವಮಾನದ ಎದುರಿನ ಕಲಾತ್ಮಕ ಕ್ರಾಂತಿಶೀಲತೆಗೆ ತಕ್ಕುದಾದ ಭಾವಾಭಿವ್ಯಕ್ತಿ ಹಾಗೂ ಭಾಷಾಭಿವ್ಯಕ್ತಿಯು ಅಪ್ಯಾಯಮಾನವಾಗಿತ್ತು. ಸೊಣ್ಣಿಯಾಗಿ ಅಂಕಿತಾ ಶೆಟ್ಟಿ ಅವರದ್ದು ಜೀವಪೂರ್ಣ ಅಭಿನಯ. ಬಡತನ ಮತ್ತು ಅವಮಾನಗಳ ನಡುವೆ ಜೀವನಪ್ರೀತಿ-ನಿರ್ಭೀತಿಯುಳ್ಳ ದಲಿತ ಸ್ತ್ರೀಯರ ಆಂತರ್ಯಕ್ಕೆ ಕನ್ನಡಿಯೋ ತಾನೆಂಬಂತೆ ರಂಗವನ್ನು ಆವರಿಸಿಕೊಂಡರು. ಠೊಣ್ಣಿ-ಸೊಣ್ಣಿಯರ ಮಗ ಅಪಾರಿಯಾಗಿ ಪ್ರಜ್ವಲ್ ವಿ.ಸಿ. ಹಾಗೂ ಮಗಳು ತಿಮ್ಮಿಯಾಗಿ ಎಂಜೆಲ್ ರಾಣಿ ಹಾಗೂ ಗೌಡನ ಮಗಳು ಲಚ್ಚಿಯಾಗಿ ತನುಶ್ರೀ ಜಿ. ಅವರ ಅಭಿನಯದಲ್ಲಿ ಮಕ್ಕಳ ಮುಗ್ಧತೆಗೆ ಯಾವುದೇ ಕೊರತೆಯಾಗಿರಲಿಲ್ಲ. ಮಕ್ಕಳ ಸಹಜವಾದ ಅಳು-ನಗು-ನೋವು-ಆಟ-ಓಟ-ಊಟಗಳನ್ನು ಮಾಗಿದ ರೀತಿಯಲ್ಲಿ ಅಭಿವ್ಯಕ್ತಿಸಿದ್ದು ಆಪ್ತವೆನಿಸಿತು. ಗೌಡನಾಗಿ ಭುವನ್ ವಿ· ಹಾಗೂ ಗೌಡ್ತಿಯಾಗಿ ಮಾನಸ ಜಿ· ಅವರ ಪಾತ್ರ ನಿರ್ವಹಣೆಯಲ್ಲಿ ಉಳ್ಳವರ ಮನೆಯ ಯಜಮಾನಿಕೆಯ ಗತ್ತು, ರೋಷಾವೇಶಗಳು ಗಟ್ಟಿಯಾಗಿಯೇ ಮೂಡಿಬಂದವು· ಸೆಲ್ವಪ್ಪನಾಗಿ ಭಗವತ್ ಶ್ರೀ ಎಸ್. ಹಾಗೂ ಬಶೀರ್ ಸಾಬ್ ಆಗಿ ಶ್ರೇಯಸ್ ಎಂ. ಅವರು ತಮ್ಮ ಸಂಭಾಷಣೆಯಲ್ಲಿ ತೋರುತ್ತಿದ್ದ ಭಾಷಿಕ ವೈಶಿಷ್ಟ್ಯತೆಯು ಎಲ್ಲರನ್ನೂ ಥಟ್ಟನೆ ಸೆಳೆದುಬಿಟ್ಟಿತ್ತು· ಪೊಲೀಸ್ ಪಾತ್ರಧಾರಿ ಗಟ್ಟು ಸುರೇಂದ್ರ ತನ್ನ ಪಾತ್ರಕ್ಕೆ ತಕ್ಕುದಾದ ನ್ಯಾಯ ಸಲ್ಲಿಸುವಲ್ಲಿ ಶ್ರಮಿಸಿದ್ದು ಎದ್ದು ಕಾಣುತ್ತಿತ್ತು· ಇಡೀ ನಾಟಕಕ್ಕೆ ವಿಶೇಷ ಪೋಷಕ ಪಾತ್ರಗಳಾಗಿದ್ದವರು-ಲಕ್ಷ್ಮಕ್ಕನಾಗಿ ಅನ್ನಪೂರ್ಣ ಎನ್., ಗೌರಕ್ಕನಾಗಿ ಭೂಮಿಕ ಎಂ., ಬಸಕ್ಕನಾಗಿ ಅನುಷಾ ಎ.ಟಿ. ಹಾಗೂ ಗಿರಿಜಕ್ಕನಾಗಿ - ಪವಿತ್ರ ವಿ. ಈ ನಾಲ್ವರು ಊರೊಂದರ ಒಡಲಲ್ಲಿ ಸದಾ ಕ್ರಿಯಾಶೀಲವಾಗಿರುವ ಹೆಣ್ಣುಮಕ್ಕಳ ಪ್ರತಿನಿಧಿ ಪಾತ್ರಗಳು· ಇವರು ಪರಸ್ಪರ ಕಾಲೆಳೆದುಕೊಳ್ಳುವ, ಜಗಳವಾಡುವ, ಭೇಧಮಾಡುವ, ಇದ್ದಕ್ಕಿದ್ದಂತೆ ಉರಿಯುವ, ಥಟ್ಟನೆ ಕರಗುವ, ಗಂಭೀರ ಸಂದರ್ಭಕ್ಕೆ ಪಲಾಯನಗೈಯ್ಯುವ, ಊರೆಲ್ಲರ ಊಸಾಬರಿಯೇ ತಮ್ಮದೆಂಬಂತೆ ಚಡಪಡಿಸುವ ಗಟ್ಟಿಗಿತ್ತಿಯರು-ಇಂಥ ಪಾತ್ರಗಳನ್ನು

ನಾಲ್ವರೂ ವಿದ್ಯಾರ್ಥಿನಿಯರು ಥೇಟ್ ಊರ ಗರತಿಯರಂತೆ, ಗಟ್ಟಿಗಿತ್ತಿಯರಂತೆ ಭಾವಪೂರ್ಣ ಅಭಿನಯ ನೀಡಿದ್ದು ಮರೆಯಲಾಗದು· ಇವರೆಲ್ಲರ ಅಭಿನಯಕ್ಕೆ ಪೂರಕವಾಗಿ ಮೂಡಿಬಂದ ಹಾಡುಗಳೂ ಮತ್ತೆ ಮತ್ತೆ ಮೆಲುಕುಹಾಕುವಂಥವು·



**(ಚಿತ್ರ: ಪ್ರಾಂಶುಪಾಲರೊಂದಿಗೆ ಕನ್ನಡ ವಿಭಾಗ ಹಾಗೂ ರಂಗಾಂತರಂಗ ಟೀಮ್)**

## ಹಸಿವು ಕಂಡ ಅಂತರಂಗದ ನುಡಿ

ಸಣ್ಣಪುಟ್ಟ ಕೊರತೆಗಳಿದ್ದಾಗ್ಯೂ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಗುರುತರವಾದ ಹೆಜ್ಜೆಯನ್ನಿಟ್ಟ ವಿದ್ಯಾರ್ಥಿಗಳೆಲ್ಲರೂ ಅಭಿನಂದನಾರ್ಹರು. ತಾವು ನಿರ್ವಹಿಸಿದ ಪಾತ್ರಕ್ಕೆ ನ್ಯಾಯವೊದಗಿಸುವಲ್ಲಿ ವಿದ್ಯಾರ್ಥಿಕಲಾವಿದರು ಉದಯೋನ್ಮುಖ ರಂಗಕಲಾವಿದರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಕ್ರಿಸ್ತು ಜಯಂತಿ ಕಾಲೇಜಿನ ಪ್ರಾಂಶುಪಾಲರಾದ ಫಾದರ್ ಡಾಕ್ಟರ್ ಅಗಸ್ಟಿನ್ ಜಾರ್ಜ್ ಅವರು ಸಮರ್ಥವಾಗಿ ಗುರ್ತಿಸಿದಂತೆ, "ನಮ್ಮ ವಿದ್ಯಾರ್ಥಿಗಳು ಹಸಿವಿನ ನಾಟಕವನ್ನು ಕೇವಲ ಅಭಿನಯಿಸಲಿಲ್ಲ; ಅನುಭಾವಿಸಿದರು. ಹಸಿವನ್ನು ನಟಿಸಲಿಲ್ಲ; ಜೀವಿಸಿದರು. ಇವರ ಜೀವಪೂರ್ಣ ನಟನೆಯನ್ನು ಕಂಡು ಹೆಮ್ಮೆ ಎನಿಸಿತು. ನಮ್ಮ ಕಾಲೇಜಿಗೆ ಇಂಥ ಹೊಸ ಅನುಭವದ ನಾಟಕವನ್ನು ನೀಡಿದ್ದಕ್ಕೆ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ·ಸರ್ವೇಶ್ ಬಿ·ಎಸ್·, ನಾಟಕ ಸಂಯೋಜಕರಾದ ಡಾ·ರವಿಶಂಕರ್ ಎ·ಕೆ, ಡಾ·ಭೈರಪ್ಪ ಎಂ, ಸಲಹೆ-ಸಹಕಾರ ನೀಡಿದ ಪ್ರೊ·ಚಂದ್ರಶೇಖರ್ ಎನ್·, ಡಾ·ಸೈಯದ್ ಮುಯಿನ್ ಅವರಿಗೆ ಹಾಗೂ ನಾಟಕ ನಿರ್ದೇಶಕರಾದ ಡಾ.ಪವಿತ್ರ ಅವರಿಗೆ ವಿಶೇಷವಾದ ಅಭಿನಂದನೆಗಳು ಸಲ್ಲಲೇಬೇಕಾಗಿದೆ'.

ರಂಗನಿರ್ದೇಶಕಿ ಹಾಗೂ ಪ್ರಾಧ್ಯಾಪಕಿ ಡಾ·ಪವಿತ್ರ ಅವರು ಪ್ರಸ್ತುತ ರಂಗರೂಪದಲ್ಲಿ ತೋರಿದ ಆಸಕ್ತಿ, ಶ್ರದ್ಧೆಯು ಮನನೀಯ· ಅವರೇ ಅಭಿಪ್ರಾಯಪಡುವಂತೆ, "ನಮ್ಮ ಕೆಜೆಸಿಯಲ್ಲಿ ಕನ್ನಡ ನಾಟಕ ಪ್ರದರ್ಶನಕ್ಕೆ ಒಂದು ಅಪೂರ್ವ ಚರಿತ್ರೆ ಇದೆ· ಕನ್ನಡ ವಿದ್ಯಾರ್ಥಿಗಳೇ ಇಲ್ಲದ ಕಾಲದಲ್ಲಿ ಮಲೆಯಾಳಂ ವಿದ್ಯಾರ್ಥಿಗಳಿಂದ ಕನ್ನಡ ನಾಟಕವನ್ನು ಕಲಿಸಿ ಪ್ರದರ್ಶಿಸಲಾಗಿತ್ತು· ಈ ದಿಸೆಯಲ್ಲಿ ಈ ವರ್ಷ ಕುಂ·ವೀ· ಅವರ ಕಥೆಯನ್ನು ಈ ಕಾಲದ ಕಥೆಯಾಗಿಸಿಕೊಂಡು ರಂಗರೂಕ್ಕಿಳಿಸಿ, ಹಸಿವು ಎಂದರೆ ಏನೆಂದು ಗೊತ್ತಿಲ್ಲದ ವಿದ್ಯಾರ್ಥಿಸಮೂಹದ ಎದುರು ಹಸಿವಿನ ಚಿತ್ರಣ ನೀಡುವುದು ಸವಾಲಾಗಿತ್ತು· ಈ ಸವಾಲನ್ನು ರಂಗಾಸಕ್ತ ವಿದ್ಯಾರ್ಥಿಗಳ ಮೂಲಕ ಯಶಸ್ವಿಯಾಗಿ ಪೂರೈಸುವ ನಿಟ್ಟಿನಲ್ಲಿ ನಾಟಕವು ಮೂಡಿಬಂದಿತು· ರಂಗಾಭಿವ್ಯಕ್ತಿಗೆ ತಮ್ಮನ್ನು ಒಗ್ಗಿಸಿಕೊಂಡ ವಿದ್ಯಾರ್ಥಿಗಳು ಪರಿಣಾಮಕಾರಿ ಅಭಿನಯದ ಮೂಲಕ ಕನ್ನಡ ವಿಭಾಗದ ರಂಗಾಂತರಂಗಕ್ಕೆ ಮತ್ತೊಂದು ಗರಿ ಮೂಡಿಸಿದ್ದು ಹೆಮ್ಮೆ ಎನಿಸುತ್ತದೆ·"

"'ಹಸಿವು' ನಾಟಕವು ಕ್ರಿಸ್ತು ಜಯಂತಿ ಕಾಲೇಜಿನ ರಂಗಾಂತರಂಗದ ರಂಗ ಪ್ರಯೋಗಗಳ ಸಾಲಿನಲ್ಲಿ ಒಂದು ವಿಶೇಷ ಪ್ರಯೋಗ. ಕುಂ.ವೀ. ಅವರ ಕಥೆಗಳಲ್ಲಿ ಆಳವಾಗಿ ಬೇರೂರಿಕೊಂಡು ಬಂದಿರುವ ಬಡತನ, ಗ್ರಾಮೀಣ ಬದುಕಿನ ಚಿತ್ರಗಳಲ್ಲಿ ಅಡಗಿರುವ ಹಸಿವಿನ ಕರಾಳ ರೂಪವನ್ನು ಡಾ.ಪವಿತ್ರ ಅವರು ಸಮರ್ಥವಾಗಿ ನಿರ್ದೇಶಿಸಿದ್ದಾರೆ. ನನಗೆ ವಯಕ್ತಿಕವಾಗಿ ಸಂತೋಷವನ್ನು ನೀಡಿದ್ದೇನೆಂದರೆ, ಹಸಿವಿನ ಪರಿಚಯವೇ ಇರದ ನಮ್ಮ ವಿದ್ಯಾರ್ಥಿಗಳು ಈ ನಾಟಕದ ಪಾತ್ರಗಳಲ್ಲಿ ಜೀವಿಸಿದ್ದು. ಗ್ರಾಮೀಣ ಬದುಕು, ಜೀವನ, ಭಾಷೆ ಹೀಗೆ ಪರಿಚಯವೇ ಇರದ ಲೋಕದಲ್ಲಿ ಅತ್ಯಂತ ನೈಜವಾಗಿ ಅಭಿನಯಿಸಿ ಎಲ್ಲರ ಮನಸುಗಳನ್ನು ಗೆದ್ದಿದ್ದಾರೆ. ರಂಗಾಂತರಂಗದ ಹಿರಿಮೆಯನ್ನು ಮುನ್ನಡೆಸುತ್ತಿದ್ದಾರೆ.."ಎಂದು ವಿದ್ಯಾರ್ಥಿಗಳ ಕಲಾಭಿವ್ಯಕ್ತಿಗೆ ಹೆಮ್ಮೆಪಡುತ್ತಾರೆ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎಸ್.ಸರ್ವೇಶ್ ಅವರು. ಕನ್ನಡ ವಿವೇಕಭೂಮಿಯಿಂದ ಸರ್ವಜನ ಜೀವಾಧಾರವಾದ ಅನ್ನದೇವರನ್ನು ರಂಗದಂಗಳಕ್ಕೆ ಕರೆತಂದು, ಆಧುನಿಕರ ಅರಿವನ್ನು ಬೆಳಗಿದ ಕಲಾಯಾನವು ಅವಿಸ್ಮರಣೀಯ. ಆಧುನಿಕ ಯುಗಮಾನದಲ್ಲಿ ಕಲಾಯಾನಿಗಳಿಗೆ ತೀವ್ರ ಕೊರತೆಯುಂಟಾಗುತ್ತಿರುವಾಗ, ಖಾಲಿಕೊಡಗಳಂತಿದ್ದ ಯುವ ವಿದ್ಯಾರ್ಥಿಗಳಲ್ಲಿ ಕಲಾಜಲವನ್ನು ತುಂಬಿ ತುಳುಕಿಸಿ, ಕಲಾಜೀವಿಗಳನ್ನಾಗಿ ಮಾಡುವಲ್ಲಿ ಇಂತಹ ರಂಗಪ್ರಯೋಗಗಳ ಪಾತ್ರ ಮಹತ್ತರವಾದುದು.

## ಪರಾಮರ್ಶನ


1. **ತ.ರಾ.ಸು *(1954);* ಅನ್ನಾವತಾರ*;* ಮಿತ್ರವೃಂದ ಪ್ರಕಾಶನ, ಕಾಸರಗೋಡು.**
2. **ಅಂಬಿಕಾತನಯದತ್ತರ ಸಮಗ್ರಕಾವ್ಯ*(2017;* ಮೊದಲ ಮುದ್ರಣ-*2003)* ವಿನ್ಯಾಸ*;* ಸಂಪುಟ-*4(*ಪರಿಷ್ಕೃತ-ವಿಸ್ತೃತ *2*ನೇ ಆವೃತ್ತಿ*);* ಡಾ.ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.**
3. **ಕುಂ.ವೀರಭದ್ರಪ್ಪ (*2010*); ಕುಂ.ವೀ ಅವರ ಸಮಗ್ರ ಕಥೆಗಳು*;* ಬರಿ ಕಥೆಯಲ್ಲೋ ಅಣ್ಣಾ*;* ಸಪ್ನ ಬುಕ್ ಹೌಸ್, ಬೆಂಗಳೂರು.**
4. **ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಕನ್ನಡ ವಿಭಾಗದ ರಂಗಾಂತರಂಗ ವೇದಿಕೆ ವತಿಯಿಂದ ದಿನಾಂಕ*: 03.04.2023*ರಂದು ಪ್ರದರ್ಶನಗೊಂಡ 'ಹಸಿವು' ನಾಟಕ ಪ್ರದರ್ಶನ.**
5. ***https://kanaja.karnataka.gov.in***
6. ***https://kristujayanti.edu.in***